**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ: ಸಿ7(2)/ಪ್ರಾ.ಶಿ.ಅ/ಹೊ.ಶಾ.ನೋಂ-245/2015-16 ದಿನಾಂಕ: 05-02-2016

**ಜ್ಞಾಪನ**

ವಿಷಯ: 2016-17ನೇ ಶೈಕ್ಷಣಿಕ ಸಾಲಿನಲ್ಲಿ ಹೊಸದಾಗಿ ಶಾಶ್ವತ ಅನುದಾನರಹಿತ ಪ್ರಾಥಮಿಕ ಶಾಲೆಗಳ (1 ರಿಂದ 5 ಹಾಗೂ 6 ರಿಂದ 8 ರವರೆಗೆ) ನೋಂದಣಿ ಕುರಿತು.

ಉಲ್ಲೇಖ: 1] ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 122 ಎಸ್.ಇ.ಎಸ್ 207 ದಿನಾಂಕ: 17-5-2007.
2] ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 44 ಎಸ್.ಎಲ್.ಬಿ 2007 ದಿನಾಂಕ: 03-09-2007.
3] ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 369 ಪಿ.ಜಿ.ಸಿ 2014 ದಿನಾಂಕ: 11-11-2014 ಮತ್ತು ತಿದ್ದುಪಡಿ ಆದೇಶ ದಿನಾಂಕ: 02-05-2015.
4] ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 359 ಪಿ.ಜಿ.ಸಿ 2015 ದಿನಾಂಕ: 05-09-2015.
5] ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 549 ಪಿ.ಜಿ.ಸಿ 2015 ದಿನಾಂಕ: 02-11-2015.
6] ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 549 ಪಿ.ಜಿ.ಸಿ 2015 ದಿನಾಂಕ: 02-11-2015.
7] ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 617 ಪಿ.ಜಿ.ಸಿ 2015 ದಿನಾಂಕ: 23-12-2015.

*********

1. 2016-17ನೇ ಶೈಕ್ಷಣಿಕ ಸಾಲಿನಲ್ಲಿ ಹೊಸದಾಗಿ ಶಾಶ್ವತ ಅನುದಾನರಹಿತ ಪ್ರಾಥಮಿಕ ಶಾಲೆಗಳ ನೋಂದಣಿ ನೀಡುವ ಸಂಬಂಧ ಅರ್ಹ ನೋಂದಾಯಿತ ಸಂಸ್ಥೆಗಳು ಆನ್‌ಲೈನ್ (ONLINE) ಮೂಲಕ ಅರ್ಜಿ ಸಲ್ಲಿಸಲು ದಿನಾಂಕ: 20-12-2015 ಕಡೆಯ ದಿನಾಂಕವಾಗಿರುತ್ತದೆ.

2. ಆನ್‌ಲೈನ್ (ONLINE) ಮೂಲಕ ಅರ್ಜಿ ಸಲ್ಲಿಸಿರುವ ಉದ್ದೇಶಿತ ಶಾಲಾ ಆಡಳಿತ ಮಂಡಳಿಗಳು, ಭರ್ತಿ ಮಾಡಿದ ಅರ್ಜಿಯ ಮುದ್ರಿತ ಪ್ರತಿ ಹಾಗೂ ಅಗತ್ಯ ದಾಖಲೆಗಳೊಂದಿಗೆ ದಿನಾಂಕ:30-12-2015ರ ವರೆಗೆ ಸಂಬಂಧ ಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಲು ದಿನಾಂಕ ನಿಗಧಿಪಡಿಸಿದ್ದು ಈಗಾಗಲೇ ಈ ಅವಧಿಯು ಮುಗಿದಿದೆ.

3. ಆನ್‌ಲೈನ್ (ONLINE) ಮೂಲಕ 2016-17ನೇ ಶೈಕ್ಷಣಿಕ ಸಾಲಿಗೆ ಹೊಸ ಶಾಲೆ ನೋಂದಣಿಗಾಗಿ ಅರ್ಜಿ ಸಲ್ಲಿಸಿರುವ ಶಾಲಾ ಆಡಳಿತ ಮಂಡಳಿಗಳ ಶಾಲೆಗಳ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿಶೀಲಿಸಿ ನಿಯಮಾನುಸಾರ ಭೌತಿಕ ಹಾಗೂ ನೂತನ ಆನ್‌ಲೈನ್ ತಂತ್ರಾಂಶದಲ್ಲಿ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರಿಗೆ ದಿನಾಂಕ: 31-01-2016 ರ ಒಳಗಾಗಿ ಸಲ್ಲಿಸಬೇಕು.

4. ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಆಯಾ ಜಿಲ್ಲಾ ಉಪನಿರ್ದೇಶಕರು ಪರಿಶೀಲಿಸಿ ಜಿಲ್ಲಾ ತ್ರಿಸದಸ್ಯ ಸಮಿತಿಯು ಸ್ಥಳಭೇಟಿ ಮಾಡಿರುವ ವರದಿ ಪಡೆದು ಪ್ರಸ್ತಾವನೆಗಳನ್ನು ಇತ್ಯರ್ಥಪಡಿಸತಕ್ಕದ್ದು.

ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

...2

**2016-17ನೇ ಸಾಲಿನಲ್ಲಿ 1 ರಿಂದ 5ನೇತರಗತಿಯ ಮತ್ತು 6ರಿಂದ 8ನೇ ತರಗತಿಯ ಎಲ್ಲಾ ಮಾಧ್ಯಮದಲ್ಲಿ ಹೊಸ ಶಾಲೆಗಳಿಗೆ ಮಂಜೂರಾತಿ ನೀಡುವ ಸಂಬಂಧ ಅನುಸರಿಸಬೇಕಾದ ವೇಳಾಪಟ್ಟಿ**

| ಕ್ರ.ಸಂ | ವಿಷಯ | ನಿಗಧಿಪಡಿಸಿದ ದಿನಾಂಕ |
|---|---|---|
| 1 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲಾ ಉಪನಿರ್ದೇಶಕರಿಗೆ ಪ್ರಸ್ತಾವನೆಯನ್ನು ಭೌತಿಕ ಹಾಗೂ ನೂತನ ಆನ್‌ಲೈನ್ ತಂತ್ರಾಂಶದಲ್ಲಿ ಸಂಬಂಧಿಸಿದ ಉಪನಿರ್ದೇಶಕರಿಗೆ ಸಲ್ಲಿಸಲು ಕಡೆಯ ದಿನಾಂಕ | 31-01-2016 |
| 2 | ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿಯ ವರದಿಯೊಂದಿಗೆ ಉಪನಿರ್ದೇಶಕರು ಹೊಸ ಶಾಲೆಗಳ ನೋಂದಣಿ ಪ್ರಸ್ತಾವನೆಗಳನ್ನು ಭೌತಿಕ ಹಾಗೂ ನೂತನ ಆನ್‌ಲೈನ್ ತಂತ್ರಾಂಶದಲ್ಲಿ ಪ್ರಚಲಿತ ನಿಯಮಗಳಂತೆ ಇತ್ಯರ್ಥಪಡಿಸಿ ಮಂಜೂರಾತಿ/ತಿರಸ್ಕೃತ ಆದೇಶ ಹೊರಡಿಸಲು ಕೊನೆಯ ದಿನಾಂಕ | 29-02-2016 |

5/2/16

(ಕೆ.ಎಸ್.ಸತ್ಯಮೂರ್ತಿ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ.

ಗೆ,

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಹಾಗೂ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಸಾ.ಶಿ.ಇ. ಬೆಂಗಳೂರು,
3. ಕಛೇರಿ ಪ್ರತಿ.